ಅ) ಸರ್ಕಾರದ ಪ್ರಸ್ತುತ ನೀತಿಯಂತೆ ಅರಣ್ಯದಲ್ಲಿ ಹಸಿರು ಮರಗಳನ್ನು ಕಡಿಯಲು ನಿಷೇಧವಿರುವುದರಿಂದ ಮುಖ್ಯ ಅರಣ್ಯ ಉತ್ಪನ್ನಗಳನ್ನು ಅರಣ್ಯದಿಂದ ಹೊರ ಸಾಗಿಸಲು ಪರವಾನಗಿ ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಅರಣ್ಯದಲ್ಲಿ ಸ್ವಾಭಾವಿಕವಾಗಿ ಒಣಗಿ ಗಾಳಿಗೆ ಬಿದ್ದ ಮರಗಳನ್ನು ಮಾತ್ರ ಇಲಾಖಾ ವತಿಯಿಂದ ಸಂಗ್ರಹಿಸಿ ಅವುಗಳನ್ನು ಹತ್ತಿರದ ಸರ್ಕಾರಿ ಮರ ಸಂಗ್ರಹಾಲಯಕ್ಕೆ ಸಾಗಿಸಿ ಬಹಿರಂಗ ಹರಾಜು ಮಾಡಲಾಗುತ್ತಿದೆ. ಹರಾಜಿನಲ್ಲಿ ಖರೀದಿಸಿದ ಮರವನ್ನು ಸಾಗಿಸಲು ಮಾತ್ರ ಪರವಾನಗಿ ನೀಡಲಾಗುತ್ತಿದೆ.

ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣಾ ಗುತ್ತಿಗೆಯನ್ನು ಗಿರಿಜನರ ಸಂಘಗಳಿಗೆ (ಲ್ಯಾಂಪ್ ಸೊಸೈಟಿಗಳಿಗೆ) ನೀಡುತ್ತಿದ್ದು, ಸದರಿ ಸಂಘಗಳು ಅರಣ್ಯದಲ್ಲಿ ಸಂಗ್ರಹಿಸಿದ ಕಿರು ಅರಣ್ಯ ಉತ್ಪನ್ನಗಳ ಸಾಗಾಣಿಕೆಗೆ ಮಾತ್ರ ಪರವಾನಗಿಯನ್ನು ನೀಡಲಾಗುತ್ತಿದೆ.

ಆ) ರಾಜ್ಯ ಸರ್ಕಾರಿ ಆದೇಶ ಸಂಖ್ಯೆ:ಎಫ್.ಎಫ್.ಡಿ 264 ಎಫ್.ಣಡಿ 75, ದಿನಾಂಕ: 7-1-1976ರ ಪ್ರಕಾರ ರಾಜ್ಯದಲ್ಲಿ ಎಲ್ಲೆಲ್ಲಿ ಗಿರಿಜನರ ಸಂಘಗಳು (ಲ್ಯಾಂಪ್ ಸೊಸೈಟಿಗಳು) ಅಸ್ತಿತ್ವದಲ್ಲಿದೆಯೋ ಅವುಗಳಿಗೆಲ್ಲಾ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣಾ ಗುತ್ತಿಗೆಯನ್ನು ನಿಗದಿತ ತಗ್ಗು ಬೆಲೆಗೆ ನೀಡಬೇಕೆಂದು ಆದೇಶವಿರುತ್ತದೆ. ಗಿರಿಜನರ ಸಂಘಗಳು ಅಸ್ತಿತ್ವದಲ್ಲಿ ಇಲ್ಲದೆಯಿರುವ ಕಡೆಯಲ್ಲಿ ಮಾತ್ರ ಕಿರು ಅರಣ್ಯ ಉತ್ಪನ್ನಗಳ ಸಂಗ್ರಹಣಾ ಗುತ್ತಿಗೆಯನ್ನು ಟೆಂಡರ್-ಕಂ-ಹರಾಜು ಮೂಲಕ ವಿಲೇವಾರಿ ಮಾಡಲಾಗುತ್ತಿದೆ. ಅದ್ದರಿಂದ ಈ ಬಗ್ಗೆ ಹೊಸದಾಗಿ ಸರ್ಕಾರಿ ಆದೇಶ ಹೊರಡಿಸುವ ಅರತ್ಯ ಕಂಡುಬರುವುದಿಲ್ಲ.

ಇ) ಅರಣ್ಯದಿಂದ ನೇರವಾಗಿ ಬೊಂಬುಗಳನ್ನು ಸಾಗಿಸಲು ಪರವಾನಿಗೆ ನೀಡಲು ಅವಕಾಶವಿರುವುದಿಲ್ಲ. ಆದರೆ ಸರ್ಕಾರಿ ಬೊಂಬು ಸಂಗ್ರಹಾಲಯಗಳಿಂದ ಮಾತ್ರ ಬೊಂಬುಗಳನ್ನು ಮೇದಾರರಿಗೆ ಹಾಗೂ ಇತರರಿಗೆ ಪರವಾನಿಗೆ ನೀಡಲಾಗುತ್ತಿದೆ. ಪರಿಶಿಷ್ಟ ಪಂಗಡದವರಿಗೆ ಟ್ರೈಬಲ್ ಸಬ್ ಪ್ಲಾನ್ ಅಡಿಯಲ್ಲಿ ಉಚಿತವಾಗಿ ಬೊಂಬುಗಳನ್ನು ನೀಡಲಾಗುತ್ತಿದೆ.

ಈ) ಬಿದಿರು ಬೊಂಬುಗಳಿಂದ ತಯಾರಿಸಿದ ವಸ್ತುಗಳನ್ನು ಸಾಗಿ ಸಲು ಯಾವುದೇ ರೀತಿಯ ಪರವಾನಿಗೆಯನ್ನು ಆಗ್ರಹಪಡಿಸಬಾರದೆಂದು ಅರಣ್ಯ ಇಲಾಖೆ ಆದೇಶ ಸಂಖ್ಯೆ ಎ ·7.ಬಿಎಂಬಿ.21:87-88: ದಿನಾಂಕ 18-05-1989ರಲ್ಲಿ ಇಲಾಖಾ ಅಧಿಕಾರಿಗಳಿಗೆ ಸೂಚನೆಯನ್ನು ನೀಡಲಾಗಿದೆ.

ಅರಣ್ಯ ಇಲಾಖೆಯಲ್ಲಿನ ಮೀಸಲಾತಿ ಕುರಿತು

1181 ಎ - ಶ್ರೀ ಹೆಚ್.ಡಿ. ಬಸವರಾಜು (ವೀರಾಜಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಅರಣ್ಯ ಇಲಾಖೆಗೆ ಸೇರಿದ ಸರ್ಕಾರಿ ಕೆಲಸಕ್ಕೆ ಸರ್ಕಾರ ನಿಗದಧಿಪಡಿಸಿದ ಮೀಸಲಾತಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಪರಿಶಿಷ್ಟ ಪಂಗಡದವರನ್ನು ನೇಮಕ ಮಾಡುತ್ತಿದ್ದೀರಾ ಅಥವಾ ಇಲ್ಲವಾ:

ಆ) ನೇಮಕಾತಿಯಲ್ಲಿ ಪರಿಶಿಷ್ಟ ಪಂಗಡದವರಿಗೆ ಮೀಸಲಾತಿಯನ್ನು ಹೆಚ್ಚಿಸುವ ಆಲೋಚನೆ ಇದೆಯೇ?

ಶ್ರೀ ಹೆಚ್.ವೈ. ಮೇಟಿ (ಅರಣ್ಯ ಸಚಿವರು) :

ಅ) ಅರಣ್ಯ ಇಲಾಖೆಯಲ್ಲಿ ಈ ಕೆಳಗಿನ ಎರಡು ಹುದ್ದೆಗಳಲ್ಲಿ ಮಾತ್ರ ಮಿಸಲಾತಿಗಿಂತ ಹೆಚ್ಚಿನ ಪರಿಶಿಷ್ಟ ಪಂಗಡದವರ ನೇಮಕಾತಿಯಾಗಿದೆ.

	ಒಟ್ಟು ಸಿಬ್ಬಂದಿಗಳು	ಪರಿಶಿಷ್ಟ ಪಂಗಡದವರು
ಆನೆ ಮಾಹುತರು	49	45
ಆನೆ ಕಾವಡಿ	40	34

ಆ) ಇಲ್ಲ

ವೀರಾಜಪೇಟೆ ತಾಲ್ಲೂಕಿನ ಸರ್ಕಾರಿ ಆಸ್ಪತ್ರೆಗಳಿಗೆ ಉಚಿತ ಔಷಧಿ ಸರಬರಾಜು ಕುರಿತು

924 ಎ - ಶ್ರೀ ಹೆಚ್.ಡಿ. ಬಸವರಾಜು (ವೀರಾಜಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ವೀರಾಜಪೇಟೆ ತಾಲ್ಲೂಕಿನಲ್ಲಿರುವ ಎಲ್ಲಾ ಸರ್ಕಾರಿ ಆಸ್ಪತ್ರೆಗಳಿಗೆ ಉಚಿತ ಔಷಧಿ ಸರಬರಾಜು ಆಗುತ್ತಿದೆಯಾ? ಹಾಗಿದ್ದರೆ ವರ್ಷಕ್ಕೆ ಸರ್ಕಾರ ಈ ಬಾಬ್ತುನಲ್ಲಿ ವೆಚ್ಚ ಮಾಡುತ್ತಿರುವ ಹಣವೆಷ್ಟು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ವೀರಾಜಪೇಟೆ ತಾಲ್ಲೂಕಿನಲ್ಲಿರುವ ಎಲ್ಲಾ ಆಸ್ಪತ್ರೆಗಳಿಗೆ ಜಿಲ್ಲಾ ಪಂಚಾಯತ್ ಹಾಗೂ ಸರ್ಕಾರಿ ಔಷಧಿ ಮಳಿಗೆ, ಬೆಂಗಳೂರಿನಿಂದ ಉಚಿತ ಔಷಧಿಗಳ ಪೂರೈಕೆಗಾಗಿ ವರ್ಷಕ್ಕೆ ಒಟ್ಟು ರೂ. 18,70,000-00 ಗಳನ್ನು ವೆಚ್ಚ ಮಾಡಲಾಗುತ್ತಿದೆ (1994-95ನೇ ಸಾಲಿನ ಅಂಕಿ).

ತಾಯಿ ಮಕ್ಕಳ ಆರೋಗ್ಯ ಕುರಿತು

728 - ಶ್ರೀ ಕುಂಬ್ಳೆ ಸುಂದರರಾವ್ (ಸೂರತ್ಕಲ್ ಕ್ಷೇತ್ರ) : ಮಾನ್ಯ ಆರೋಗ್ಯ ಮತ್ತುಕುಂಟುಂಬ ಕಲ್ಯಾಣಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಜಾರಿಯಲ್ಲಿರುವ ತಾಯಿ ಮತ್ತು ಮಕ್ಕಳ ಆರೋಗ್ಯದ ಕುರಿತಾದ ವಿವಿಧ ಯೋಜನೆಗಳು ಯಾವುವು?

ಆ) ಅನಾರೋಗ್ಯದ ವಿವಿಧ ಕಾರಣಗಳಿಂದಾಗಿ ಸಾಯುತ್ತಿರುವ ತಾಯಿ ಮತ್ತು ಮಕ್ಕಳ ಸಂಖ್ಯೆ ಎಷ್ಟು?

ಇ) ಅನಾರೋಗ್ಯದಿಂದ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ತಾಯಿ ಮಕ್ಕಳ ಸಾವುಗಳು ಆಗುತ್ತಿರುವುದರಿಂದ ಜನರಲ್ಲಿ ಈ ಕುರಿತಾದ ಅರಿವನ್ನು ಮೂಡಿಸಲು ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು?

ಶ್ರೀ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ತಾಯಿ ಮತ್ತು ಮಕ್ಕಳ ಆರೋಗ್ಯ ಸೇವೆಗಳ ವಿವರ ಈ ಕೆಳಗಿನಂತಿವೆ.

1. ಸಾರ್ವತ್ರಿಕ ಲಸಿಕಾ ಕಾರ್ಯಕ್ರಮ

ಅ) ಆದರಡಿಯಲ್ಲಿ ಒಂದು ವರ್ಷದ ಒಳಗಿನ ಎಲ್ಲಾ ಮಕ್ಕಳಿಗೂ ಆರು ಮಾರಕ ರೋಗದ ವಿರುದ್ಧ ಲಸಿಕೆ ನೀಡುವುದು.

ಲಸಿಕೆ ಬಿ.ಸಿ.ಜಿ., ಡಿ.ಪಿ.ಟಿ. ,ಪೋಲಿಯೋ ಮತ್ತು ದಡಾರ

ಆ) 'ಎ'ಜೀವಸತ್ವದ ಕೊರತೆಯ ಬಗ್ಗೆ 'ಎ' ಅನ್ನಾಂಗ ಕೊಡಿಸುವುದು.

ಇ) [illegible] ತಾಯಂದಿರಿಗೆ ಧನುರ್ವಾಯು ವಿರುದ್ಧ ಲಸಿಕೆ ನೀಡುವುದು.